

# ನವಜಾತ ಶಿಶುವಿನ
# ಆರೈಕೆ


అమ్మ కొంగు

అమ్మ కొంగు ఆప్యాయత, అతిచక్కని సురక్షిత



అమ్మ కొంగు

అమ్మ కొంగు ఆప్యాయత, అతిచక్కని సురక్షిత



# Thermal care and delaying the bath

## ಲಕ್ಷ್ಮಿಯ ಇದುವರೆಗಿನ ಕಥೆಯ ಸಿಂಹಾವಲೋಕನ:

ನಾವು ಈ ಕಥೆಯನ್ನು ಆಲೈಸುವುದಕ್ಕೆ ಮುಂಚೆ ಮುಖ್ಯ ಪಾತ್ರಧಾರಿ ಲಕ್ಷ್ಮಿಯ ಇತಿಹಾಸವನ್ನು ಮತ್ತೊಮ್ಮೆ ಅರಿತುಕೊಳ್ಳೋಣ. 13 ವರ್ಷ ಪ್ರಾಯದ ಬಾಲಕಿ ಲಕ್ಷ್ಮಿ ಯಾವಾಗಲೂ ಸಂತೋಷ ಮತ್ತು ಉತ್ಸಾಹದಿಂದ ಇರುತ್ತಿದ್ದಳು. ಅವಳಿಗೆ ರಕ್ತಹೀನತೆ ಉಂಟಾದಾಗ ಮಾತ್ರವೇ ಆಕೆಯ ಉತ್ಸಾಹ ಕುಗ್ಗಿ ಹೋಗಿತ್ತು. ಹಾಗಿದ್ದರೂ, ಆಶಾ ಅಕ್ಕನೊಂದಿಗೆ ಮಾತನಾಡುತ್ತಾ ಮತ್ತು ಕೈಗೊಳ್ಳಬೇಕಾದ ಮನ್ನೆಚ್ಚರಿಕೆಗಳನ್ನು ಸರಿಯಾಗಿ ಪಾಲಿಸುತ್ತಾ ಅವಳು ತನ್ನು ರಕ್ತಹೀನತೆಯನ್ನು ಸರಿಪಡಿಸಿಕೊಂಡಳು.ಆಶಾ ಅಕ್ಕ ಲಕ್ಷ್ಮಿಯನ್ನು ಕುತೂಹಲದಿಂದ ಗಮನಿಸುತ್ತಾ ವ್ಯಯುಕ್ತಿಕ ಆರೋಗ್ಯ ಮತ್ತು ಮುಟ್ಟು ವೇಳೆಯಲ್ಲಿನ ಆರೋಗ್ಯ ಕುರಿತಂತೆ ಕೆಲವೊಂದು ಅಮೂಲ್ಯವಾದ ಸಲಹೆಗಳನ್ನು ನೀಡಿದಳು. ಅವಳು ನೆರೆದಿರುವುದೇ ವಿವಾಹವಾಗುವುದಕ್ಕೆ ಸಾಕಾಗುತ್ತದೆ ಎಂದು ಭಾವಿಸುತ್ತಾ ಲಕ್ಷ್ಮಿಯ ತಂದೆ–ತಾಯಿಗಳು ಆಕೆಗಾಗಿ ವರನನ್ನು ಹುಡುಕಲು ಪ್ರಾರಂಭಿಸಿದರು. ಆದರೆ, ಆಶಾ ಅಕ್ಕ ನಿಜವಾದ ಸಹೋದರಿಯಂತೆ ಲಕ್ಷ್ಮಿಯ ನೆರವಿಗೆ ಬಂದರು ಹಾಗೂ 18 ವರ್ಷ ಪ್ರಾಯ ತುಂಬುವುದಕ್ಕೆ ಮುಂಚೆ ವಿವಾಹವಾಗುವುದರಿಂದಾಗಿ ಉಂಟಾಗುವ ಸಮಸ್ಯೆಗಳನ್ನು ಲಕ್ಷ್ಮಿಯ ತಂದೆ–ತಾಯಿಗಳಿಗೆ ವಿವರಿಸಿ ತಿಳಿಸಿದರು. ಇದರ ಪರಿಣಾಮವಾಗಿ ಸರಿಯಾದ ಪ್ರಾಯದಲ್ಲಿಯೇ ಲಕ್ಷ್ಮಿಗೆ ವಿವಾಹವಾಯಿತು. ಅವಳು ತನ್ನ ಹೊಸ ಕುಟುಂಬದವರೊಂದಿಗೆ ಹೊಂದಿಕೊಂಡಳು ಮತ್ತು ಹೊಸ ಜೀವನವನ್ನು ಪ್ರಾರಂಭಿಸಿದಳು.

ಈಗ ಅವಳ ಮುಂದೆ ಇನ್ನೊಂದು ಸವಾಲು ಎದ್ದಿತ್ತು. ಆಕೆಯ ಅತ್ತೆಗೆ ಆದಷ್ಟು ಬೇಗನೆ ಮೊಮ್ಮಗು ಬೇಕೆಂಬ ಇಚ್ಛೆ ಉಂಟಾಯಿತು. ಲಕ್ಷ್ಮಿ ಮಗುವನ್ನು ಹೆರುವುದಕ್ಕೆ ತಯಾರಾಗಿರಲಿಲ್ಲ ಮತ್ತು ಈ ವಿಚಾರವನ್ನು ಆಶಾ ಅಕ್ಕನಲ್ಲಿ ತಿಳಿಸಿದಳು. ಲಕ್ಷ್ಮಿಯು 21 ವರ್ಷ ಪ್ರಾಯ ತುಂಬುವ ತನಕ ಮಗುವನ್ನು ಹೆರುವುದಕ್ಕಾಗಿ ದೈಹಿಕವಾಗಿ ಮತ್ತು ಮಾನಸಿಕವಾಗಿ ತಯಾರಾಗಿಲ್ಲ ಎಂದು ಆಕೆಯ ಅತ್ತೆಗೆ ಮನವರಿಗೆ ಮಾಡುವಲ್ಲಿ ಆಶಾ ಅಕ್ಕ ಯಶಸ್ವಿಯಾಗುತ್ತಾಳೆ. ಕೊನೆಗೂ ಲಕ್ಷ್ಮಿ ಸರಿಯಾದ ಪ್ರಾಯದಲ್ಲೇ ಗರ್ಭಿಣಿಯಾಗುತ್ತಾಳೆ. ಆಕೆ ಮತ್ತು ಆಕೆಯ ಮಗುವಿನ ಆರೋಗ್ಯ ಮತ್ತು ಆರೈಕೆ ಕುರಿತಂತೆ ಆಶಾ ಅಕ್ಕ ಅತ್ಯಂತ ಜಾಗರೂಕತೆಯಿಂದ ಮಾರ್ಗದರ್ಶನ ನೀಡುತ್ತಾರೆ. ಲಕ್ಷ್ಮಿ ತನ್ನ ಕುಟುಂಬದವರು ಮತ್ತು PHC ಸಿಸ್ಟರ್‌ಗಳ ನೆರವಿನಿಂದ PHC ಯಲ್ಲಿ ಆರೋಗ್ಯವಂತ ಮಗುವಿಗೆ ಜನ್ಮ ನೀಡಿದಾಗ ಆಕೆಯು ಅವರಲ್ಲಿ **“ತಾಯಿಯ ಮಮತೆ”** ಕಾಣುತ್ತಾಳೆ.



అమ్మ కొంగు
అమ్మ కొంగు ఆప్యాయత, అతిచక్కని సురక్షిత



ಆರೋಗ್ಯವಂತೆ, ಸುಂದರ ಮಗುವಿಗೆ ಜನ್ಮ ನೀಡಿರುವುದಕ್ಕಾಗಿ ಲಕ್ಷ್ಮಿಗೆ ತುಂಬಾ ಸಂತೋಷವಾಗುತ್ತದೆ. ಅವಳು ಮತ್ತೆ ಮಗುವನ್ನೇ ನೋಡುತ್ತಾ, ಈ ಮುದ್ದು ಪುಟಾಣಿನನ್ನ ಜಗತ್ತಿನ ಕೇಂದ್ರ ಬಿಂದುವಾಗಿದೆ ತನ್ನ ಸಂತೋಷದ ಸಂಕೇತವಾಗಿದೆ ಎಂದು ಯೋಚಿಸುತ್ತಾಳೆ. ಈ ಪುಟ್ಟ ಮಗುವನ್ನು ಯಾವುದೇ ಅಪಾಯ ಅಥವಾ ಖಾಯಿಲೆಗಳಿಂದ ಸಂಪೂರ್ಣವಾಗಿ ರಕ್ಷಿಸುತ್ತೇನೆ ಎಂದು ಅವಳು ಪಣ ತೊಡುತ್ತಾಳೆ. ಆಶಾ ಅಕ್ಕನ ಸಲಹೆ ಮೇರೆಗೆ ಆಸ್ಪತ್ರೆಯಲ್ಲಿ ಕನಿಷ್ಠ 48 ಗಂಟೆ ವರೆಗೆ ಉಳಿದುಕೊಳ್ಳಲು ಅವರು ನಿರ್ಧರಿಸುತ್ತಾರೆ.


ಅವಳಿಗೆ ಆರೈಕೆ ನೀಡುತ್ತಿದ್ದ PHC ಸಿಸ್ಟರ್ ತುಂಬಾ ದಯಾಳು ಮತ್ತು ಬೆಂಬಲ ನೀಡುತ್ತಿದ್ದಳು. ಅವರಿಗೆ ಬೇಕಾದ್ದು ಎಲ್ಲವನ್ನೂ ಅವಳು ಒದಗಿಸಿ ಕೊಡುತ್ತಿದ್ದಳು.

**ಇದನ್ನು ನೋಡಿದ ಅತ್ತೆಗೆ ಗೊಂದಲವಾಗುತ್ತದೆ ಮತ್ತು ಅರ್ಥವಾಗದೆ ಕೇಳಿದರು.**

ಮಗು ಜನಿಸಿದ ಬಳಿಕ PHC ಸಿಸ್ಟರ್ ಮಗುವನ್ನು ಸ್ವಚ್ಛವಾದ ಬಟ್ಟೆಯಿಂದ ಉಜ್ಜಲು ಪ್ರಾರಂಭಿಸುತ್ತಾರೆ. ಅದನ್ನು ನೋಡಿದ ಅತ್ತೆಗೆ ಗೊಂದಲವಾಗುತ್ತದೆ ಮತ್ತು ಅವರು ವಿಚಾರಿಸುತ್ತಾರೆ. “ನೀನು ಮಗುವನ್ನು ಎಲ್ಲಿ ಉಜ್ಜುತ್ತಿ? ದಯವಿಟ್ಟು ಮಗುವನ್ನು ನನಗೆ ಕೊಡು, ಅದಕ್ಕೆ ಸ್ನಾನ ಮಾಡಿಸುತ್ತೇನೆ.”

**PHC ಸಿಸ್ಟರ್ ವಿನಮ್ರತೆಯಿಂದ ನಗುತ್ತಾರೆ ಹಾಗೂ ಲಕ್ಷ್ಮಿ ಮತ್ತು ಅತ್ತೆ ಇಬ್ಬರಿಗೂ ವಿವರಿಸುತ್ತಾರೆ:**

“ನೀವು ಮಗುವಿಗೆ ಜನಿಸಿದ 48 ಗಂಟೆಗಳ ಬಳಿಕ ಮಾತ್ರವೇ ಸ್ನಾನ ಮಾಡಿಸಬೇಕು. ಇಲ್ಲವಾದರೆ ಮಗುವಿಗೆ ಖಾಯಿಲೆ ಬರುತ್ತದೆ.”




అమ్మ కొంగు

అమ్మ కొంగు ఆప్యాయత, అతిచక్కని సురక్షిత




**ಅತ್ತೆ ಹೇಳುತ್ತಾರೆ–**“ಆದರೆ ನಾನು ನನ್ನ ಮಗುವಿಗೆ ಪ್ರಸವದ ತಕ್ಷಣವೇ ಸ್ನಾನ ಮಾಡಿಸಿದ್ದೆ!”

PHC ಸಿಸ್ಟರ್ ಅವರ ಮಾತನ್ನು ಕೇಳುತ್ತಾರೆ ಮತ್ತು ಮಗುವನ್ನು ಇನ್ನೊಂದು ಸ್ವಚ್ಛವಾದ ಬಟ್ಟೆಯಿಂದ ಚೆನ್ನಾಗಿ ಸುತ್ತು ಹಾಕಿ ಮುಚ್ಚುತ್ತಾರೆ. ಮತ್ತೆ ಅವರು ಈ ಪ್ರಕ್ರಿಯೆಯನ್ನು ವಿವರಿಸುತ್ತಾರೆ.“ಮಗುವನ್ನು ಸ್ವಚ್ಛ ಮಾಡುವುದಕ್ಕಾಗಿ ನೀವು ನವಜಾತ ಶಿಶುವನ್ನು ಸ್ವಚ್ಛವಾದ ಬಟ್ಟೆಯಿಂದ ಉಜ್ಜಬೇಕು. ಆ ಬಳಿಕ ಮಗುವನ್ನು ಇನ್ನೊಂದು ಸ್ವಚ್ಛವಾದ ಬಟ್ಟೆಯಿಂದ ಸುತ್ತುವರಿಸಬೇಕು ಹಾಗೂ ಮಗುವನ್ನು ತಾಯಿಯ ಎದೆಗೆ ಸಮೀಪವಾಗಿ ಇರಿಸಬೇಕು.”



అమ్మ కొంగు

అమ్మ కొంగు ఆప్యాయత, అతిచక్కని సురక్షిత



**ಲಕ್ಷ್ಮಿಯ ಅತ್ತೆ ಹೇಳುತ್ತಾಳೆ–**"ಇದನ್ನು ಯಾಕೆ ಮಾಡಬೇಕು?"


**ಸಿಸ್ಟರ್ ಉತ್ತರಿಸುತ್ತಾಳೆ–**"ಮಗು ಜನಿಸುವುದಕ್ಕೆ ಮುಂಚೆ ತಾಯಿಯ ಗರ್ಭದಲ್ಲಿ ಬೆಚ್ಚನೆ ಮತ್ತು ಸ್ಪರ್ಶದಿಂದ ಇರುತ್ತದೆ. ಜನಿಸಿದ ಬಳಿಕ ಮಗುವನ್ನು ತಾಯಿಗೆ ಸಮೀಪವಾಗಿ ಇರಿಸುವುದರಿಂದ ಮಗುವಿಗೆ ಅದೇ ಬೆಚ್ಚನೆ ಮತ್ತು ಸ್ಪರ್ಶ ಸಿಗುತ್ತದೆ. ಇಲ್ಲವಾದಲ್ಲಿ, ಮಗುವಿನ ಉಷ್ಣತೆ ಬದಲಾಗುತ್ತದೆ ಮತ್ತು ಮಗುವಿಗೆ ಖಾಯಿಲೆ ಬರಬಹುದು. ಇದಲ್ಲದೆ ಶರೀರದ ಸಮೀಪ ಸ್ಪರ್ಶದಿಂದ ತಾಯಿ ಮತ್ತು ಮಗುವಿನ ಬಾಂಧವ್ಯ ಇನ್ನಷ್ಟು ಆಳವಾಗಿರುತ್ತದೆ."

PHC ಸಿಸ್ಟರ್ ಮಗುವನ್ನು ಲಕ್ಷ್ಮಿಗೆ ಕೊಡುತ್ತಾರೆ.ಲಕ್ಷ್ಮಿಗೆ ಆಸ್ಪತ್ರೆ ತನ್ನ ತಾಯಿ ಮನೆಯಂತೆ ಅನಿಸುತ್ತದೆ. ಏಕೆಂದರೆ PHC ಸಿಸ್ಟರ್ ಆಕೆಯನ್ನು ತುಂಬಾ ಅಕ್ಕರೆಯಿಂದ ನೋಡಿಕೊಳ್ಳುತ್ತಾಳೆ ಮತ್ತು ಸಂಪೂರ್ಣ ಸಹಕರಿಸುತ್ತಾಳೆ. PHC ಸಿಸ್ಟರ್‌ನ ಆರೈಕೆಯಲ್ಲಿ ಆಕೆ **"ತಾಯಿಯ ಮಮತೆ"** ಯನ್ನು **ಕಾಣುತ್ತಾಳೆ.**

ಸಹಾಯಕರು ಈ ಕೆಳಗಿನ ಪ್ರಶ್ನೆಗಳನ್ನು ಮುಂದಿಡುತ್ತಾರೆ:


ಪ್ರ. ಮಗುವನ್ನು ಸ್ವಚ್ಛವಾದ ಬಟ್ಟೆಯಲ್ಲಿ ಸುತ್ತುವರಿದು ಮುಚ್ಚುತ್ತಾ ತಾಯಿಯ ಶರೀರದ ಪಕ್ಕದಲ್ಲಿ ಇರಿಸುವುದು ಅಗತ್ಯವೇ?

ಪ್ರ. ಜನಿಸಿದ ಬಳಿಕ ಮಗುವನ್ನು ಯಾವಾಗ ಸ್ನಾನ ಮಾಡಿಸಬೇಕು?



అమ్మ కొంగు


అమ్మ కొంగు ఆప్యాయత, అతిచక్కని సురక్షత



ಪ್ರಸವದ ಬಳಿಕ ಲಕ್ಷ್ಮಿ ಮತ್ತು ಅವರ ಕುಟುಂಬದವರು ಇನ್ನೂ PHC ಯಲ್ಲೇ ಇದ್ದಾರೆ. ಕನಿಷ್ಠ 48 ಗಂಟೆಗಳ ವರೆಗೆ ಅಲ್ಲಿಯೇ ಇರಬೇಕು ಎಂದು ಆಶಾ ಅಕ್ಕ ಅವರಿಗೆ ಸಲಹೆ ನೀಡಿದ್ದರು. ಪ್ರಸವದ ಬಳಿಕ PHC ಸಿಸ್ಟರ್ ಮಗುವನ್ನು ಸ್ವಚ್ಛವಾದ ಬಟ್ಟೆಯಿಂದ ಉಜ್ಜುತ್ತಾರೆ ಮತ್ತು ಆ ಬಳಿಕ ಇನ್ನೊಂದು ಸ್ವಚ್ಛವಾದ ಬಟ್ಟೆಯಿಂದ ಚೆನ್ನಾಗಿ ಮುಚ್ಚಿ ಆವರಿಸುತ್ತಾರೆ. ಬಳಿಕ ಮಗುವನ್ನು ಲಕ್ಷ್ಮಿಗೆ ಕೊಡುತ್ತಾರೆ ಹಾಗೂ ಲಕ್ಷ್ಮಿ ಮಗುವನ್ನು ತನ್ನ ಶರೀರಕ್ಕೆ ಸಮೀಪವಾಗಿ ಇರಿಸಿಕೊಳ್ಳುತ್ತಾಳೆ. ಇದರಿಂದಾಗಿ ತಾಯಿಯ ಬೆಚ್ಚಗೆ ಸ್ಪರ್ಶ ಮಗುವಿಗೆ ಸಿಗುತ್ತದೆ. ಲಕ್ಷ್ಮಿ ಮಗುವನ್ನು ಪ್ರೀತಿಯಿಂದ ತೆಗೆದುಕೊಳ್ಳುತ್ತಾಳೆ ಮತ್ತು ತನ್ನ ಶರೀರಕ್ಕೆ ಸಮೀಪವಾಗಿ ಇರಿಸಿಕೊಳ್ಳುತ್ತಾಳೆ. ಈಗ ಅವಳು ಮಗುವನ್ನು ತುಂಬಾ ವಾತ್ಸಲ್ಯದಿಂದ ನೋಡುತ್ತಾಳೆ. ಮಗುವು ಹೀಗೆ ಬೆಳೆಯುತ್ತಾ ಹೋಗುತ್ತದೆ ಮತ್ತು ಒಂದು ದಿನ ನನ್ನನ್ನು "ಅಮ್ಮ" ಎಂದು ಕರೆಯುತ್ತಾಳೆ ಎಂದು ಕನಸು ಕಾಣುತ್ತಾಳೆ. ಈ ವಿಚಾರ ಯೋಚಿಸುತ್ತಾ ಅವಳು ಮುಗುಳ್ನಗುತ್ತಾಳೆ ಮತ್ತು ಕಣ್ಣಿನಿಂದ ಕಣ್ಣೀರು ಹರಿಯುತ್ತದೆ.ಅತ್ತೆಯ ಕಣ್ಣಿನಲ್ಲೂ ಕಣ್ಣೀರಿನ ಆನಂದ ಬಾಷ್ಪ ಹರಿಯುತ್ತದೆ.

**PHC ಸಿಸ್ಟರ್ ಈ ದೃಶ್ಯವನ್ನು ನೋಡುತ್ತಾರೆ, ಲಕ್ಷ್ಮಿಯ ಮೇಲೆ ಪ್ರೀತಿಯಿಂದ ಕೈ ಸವರುತ್ತಾ ಹೇಳುತ್ತಾರೆ.**"ಲಕ್ಷ್ಮಿ, ನಿನ್ನ ಮಗು ತುಂಬಾ ಸುಂದರವಾಗಿದೆ ಹಾಗೂ ಇಂತಹ ಆರೋಗ್ಯವಂತ ಮಗುವನ್ನು ಪಡೆದಿರುವುದಕ್ಕಾಗಿ ನೀನು ತುಂಬಾ ಭಾಗ್ಯಶಾಲಿ. ಈಗ ನೀನು ನಿನ್ನ ಮಗುವಿಗೆ ಮೊಲೆಹಾಲು ಉಣಿಸಬಹುದು."

**ಇದನ್ನು ಕೇಳಿದ ಅತ್ತೆ ಮಧ್ಯೆ ಮಾತಾಡುತ್ತಾಳೆ:** "ಆದರೆ, ಅವಳ ಎದೆ ಹಾಲು ತುಂಬಾ ಕೊಳಕಾಗಿದೆ. ಈಗ ನಾನು ಮಗುವಿಗೆ ಜೇನಿನೊಂದಿಗೆ ಮೊಲೆಹಾಲು ಉಣಿಸಬೇಕು"



అమ్మ కౌంగు


అమ్మ కౌంగు ఆప్యాయత, అతిచక్కని సురక్షత



**PHC ಸಿಸ್ಟರ್ ಮುಗುಳ್ನಗುತ್ತಾಳೆ ಮತ್ತು ಹೇಳುತ್ತಾಳೆ–**

"ನಿಮ್ಮ ಮೊಮ್ಮಗುವಿಗೆ ಈಗ ಬೇಕಾಗಿರುವುದೆಂದರೆ ಸ್ವಲ್ಪ ಮೊಲೆಹಾಲು ಮಾತ್ರ. ನೀವು ಬೇರೆ ಯಾವುದನ್ನಾದರೂ ಉಣಿಸಿದಲ್ಲಿ, ಮಗುವಿಗೆ ಸೋಂಕು ತಗುಲಬಹುದಾದ ಅಪಾಯವಿದೆ." "ಆದರೆ, ನಮ್ಮ ಕುಟುಂಬದಲ್ಲಿ ನಾವು ಜನಿಸಿದ ಕನಿಷ್ಠ ಮೂರು ದಿನಗಳ ವರೆಗೆ ತಾಯಿಯ ಮೊಲೆಹಾಲು ಮಗುವಿಗೆ ಕೊಡುವುದಿಲ್ಲ. ನಿಮಗೆ ತಿಳಿದಿರುವಂತೆ ಮೊದಲ 3-4 ದಿನಗಳಲ್ಲಿ ತಾಯಿಯ ಎದೆಯಿಂದ ಹಾಲು ಬರುವುದಿಲ್ಲ. ಅದು ಹಳದಿ ಬಣ್ಣದ ಮತ್ತು ದಪ್ಪವಾದ ದ್ರಾವಣ ಮತ್ತು ನೋಡಲು ಅಸಹ್ಯವಾಗಿದೆ ಮತ್ತು ಅದರಿಂದ ಮಗುವಿಗೆ ಖಾಯಿಲೆ ಬರಬಹುದು. ಆದ್ದರಿಂದ, ಮಗು ಅಳುವುದಕ್ಕೆ ಪ್ರಾರಂಭಿಸಿದರೆ ನಾವು ಜೇನು, ಆಡಿನ ಹಾಲು, ದನದ ಹಾಲು ಅಥವಾ ನೀರು ಕುಡಿಸುತ್ತೇವೆ. ಇದಲ್ಲದೆ, ಜನರು ಮಗುವಿಗೆ ಆಡಿನ ಉಚ್ಚೆ,ಗುಟ್ಟಿ ಇತ್ಯಾದಿಗಳನ್ನು ಕುಡಿಸುವುದನ್ನು ಕೂಡಾ ನಾನು ನೋಡಿದ್ದೇನೆ."

**PHC ಸಿಸ್ಟರ್ ಮುಗುಳ್ನಗುತ್ತಾರೆ ಮತ್ತು ಹೇಳುತ್ತಾರೆ–**"ಈ ಎಲ್ಲಾ ವಿಚಾರಗಳು ನಡೆಯುತ್ತವೆ ಎಂದು ನನಗೆ ತಿಳಿದಿದೆ. ಆದರೆ, ಒಂದು ವಿಷಯ ಮಾತ್ರ ಚೆನ್ನಾಗಿ ತಿಳಿದುಕೊಳ್ಳಿ. ಮೊಲೆಹಾಲು ಬಿಟ್ಟು ಬೇರೆ ಏನನ್ನೂ ಮಗುವಿಗೆ ಕೊಡಬೇಡಿ ಮತ್ತು ಹಾಗೆ ಮಾಡಿದಲ್ಲಿ ಮಗುವಿಗೆ ಸೋಂಕು ತಗುಲಬಹುದು ಮತ್ತು ಖಾಯಿಲೆ ಬರಬಹುದು. ಕಾರಣ ತುಂಬಾ ಸರಳವಾಗಿದೆ. ನಿಮ್ಮ ಮಗುವಿಗೆ ಬೇರೆ ಯಾವುದನ್ನೇ ಕುಡಿಸಿದಲ್ಲಿ, ನೀವು ಅದಕ್ಕಾಗಿ ಕೈಗಳನ್ನು, ಚಮಚ ಅಥವಾ ಬೇರೆ ಇನ್ನು ಏನನ್ನಾದರೂ ಉಪಯೋಗಿಸುತ್ತೀರಿ. ಅವುಗಳಲ್ಲಿ ರೋಗಾಣು ಇರುತ್ತವೆ ಮತ್ತು ಅದು ಮಗುವಿಗೆ ಹರಡುತ್ತದೆ. ಮಗುವಿನ ಕರುಳು ಇನ್ನೂ ಹಸಿಯಾಗಿದೆ ಮತ್ತು ಸೋಂಕುಗಳ ವಿರುದ್ಧ ಹೋರಾಡುವ ಸಾಮರ್ಥ್ಯ ಇರುವುದಿಲ್ಲ. ಇದರಿಂದಾಗಿ ನ್ಯೂಮೋನಿಯಾ ಮತ್ತು ಅತಿಸಾರವೆಂಬ ಅಪಾಯಕಾರಿ ಖಾಯಿಲೆಗಳು ಬರಬಹುದು."



అమ్మ కొంగు
అమ్మ కొంగు ఆప్యాయత, అతిచక్కని సురక్షత



**ಅತ್ತೆ ಇವುಗಳನ್ನು ಅರಿತುಕೊಳ್ಳುತ್ತಾರೆ, ತಲೆಯಾಡಿಸುತ್ತಾರೆ ಮತ್ತು ಕೇಳುತ್ತಾರೆ:**


"ಆದರೆ 3-4 ದಿನಗಳ ವರೆಗೆ ಲಕ್ಷ್ಮಿಯ ಹಾಲು ಕೊಳಕಾಗಿರುತ್ತದೆ..."

**PHC ಸಿಸ್ಟರ್ ವಿನಮ್ರತೆಯಿಂದ ಹೇಳುತ್ತಾರೆ–** "ಹಳದಿ ಮತ್ತು ದಪ್ಪವಾದ ಹಾಲನ್ನು ಕೋಲೋಸ್ಟ್ರಮ್ ಎಂದು ಕರೆಯುತ್ತಾರೆ. ಅದು ಕೊಳಕಾಗಿಲ್ಲ. ಮಗುವಿನಲ್ಲಿ ರೋಗ ನಿರೋಧಕ ಸಾಮರ್ಥ್ಯ ನಿರ್ಮಿಸುವುದಕ್ಕಾಗಿ ಅದು ತುಂಬಾ ಪ್ರಾಮುಖ್ಯವಾಗಿದೆ ಹಾಗೂ ಈ ಹಾಲು ಮಗುವನ್ನು ಅಪಾಯಕಾರಿಯಾದ ಖಾಯಿಲೆಗಳಾದ ಜಾಂಡಿಸ್ (ಕಾಮಾಲೆ ರೋಗ), ಅತಿಸಾರ ಮೊದಲಾದವುಗಳಿಂದ ರಕ್ಷಿಸುತ್ತದೆ. ಇದಲ್ಲದೆ, ಮಗುವಿನ ಕರುಳಿನಲ್ಲಿರುವ ಕಪ್ಪು ಮತ್ತು ಹಸಿರು ಮಲವನ್ನು ಹೊರಗೆ ಹಾಕುವುದಕ್ಕೂ ಕೂಡಾ ಇದು ನೆರವಾಗುತ್ತದೆ. ಕೋಲೋಸ್ಟ್ರಮ್‌ನಲ್ಲಿ ಪ್ರೋಟೀನ್, ಐರನ್ ಮತ್ತು ವಿಟಮಿನ್ ಎ,ಬಿ, ಸಿ ಗಳು ಸಮೃದ್ಧವಾಗಿವೆ. ಇದು ಮಗುವಿನ ಕರುಳನ್ನು ಬಲಪಡಿಸುತ್ತದೆ ಮತ್ತು ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಇದನ್ನು ಮಗು ಸುಲಭವಾಗಿ ಜೀರ್ಣಿಸಿಕೊಳ್ಳುತ್ತದೆ. ಆದ್ದರಿಂದಲೇ ತಾಯಿಯು ಮಗುವನ್ನು ಹೆತ್ತ ಒಂದು ಗಂಟೆಯ ಒಳಗಾಗಿ ಮಗುವಿಗೆ ಹಾಲು ಕುಡಿಸಬೇಕು ಹಾಗೂ ಮೊದಲನೇ 24 ಗಂಟೆಗಳಲ್ಲಿ ಕನಿಷ್ಠ ಹತ್ತು ಬಾರಿ ಮಗುವಿಗೆ ಮೊಲೆಹಾಲು ಉಣಿಸಬೇಕು. ತಾಯಿಯ ಸ್ಥನದಲ್ಲಿ ಕೋಲೋಸ್ಟ್ರಮ್ ಕಡಿಮೆ ಪ್ರಮಾಣದಲ್ಲಿದ್ದರೂ, ಚಿಂತಿಸಬೇಕಾದ ಅಗತ್ಯವಿಲ್ಲ. ಉತ್ತಮ ವಿಚಾರವೆಂದರೆ ಕೋಲೋಸ್ಟ್ರಮ್ 3-4 ದಿನಗಳ ವರೆಗೆ ತಾಯಿಯ ಶರೀರದಲ್ಲಿರುತ್ತದೆ ಹಾಗೂ ಮಗುವಿನಲ್ಲಿ ರೋಗ ನಿರೋಧಕ ಸಾಮರ್ಥ್ಯ ನಿರ್ಮಿಸುವುದಕ್ಕೆ ಇದು ಸಾಕಾಗುತ್ತದೆ. 3-4 ದಿನಗಳ ಬಳಿಕ ಹಾಲು ಇನ್ನಷ್ಟು ಸ್ಪಷ್ಟವಾಗುತ್ತದೆ."



అమ్మ కొంగు

అమ్మ కొంగు ఆప్యాయత, అతిచక్కని సురక్షిత



ಈ ಮಾತನ್ನು ಕೇಳಿದ ಅತ್ತೆ ಲಕ್ಷ್ಮಿಗೆ ತಕ್ಷಣವೇ ಮೊಲೆಹಾಲು ಉಣಿಸಬೇಕೆಂದು ಹೇಳುತ್ತಾಳೆ.

ಮಗುವಿಗೆ ಮೊಲೆಹಾಲು ಉಣಿಸುವ ಸರಿಯಾದ ವಿಧಾನವನ್ನು PHC ಸಿಸ್ಟರ್ ಲಕ್ಷ್ಮಿಗೆ ತೋರಿಸುತ್ತಾರೆ.

ಇಲ್ಲಿ ಸಹಾಯಕರು ಚಾರ್ಟ್ ತೋರಿಸುತ್ತಾರೆ:

**ನಿಮ್ಮ ಮಗುವಿಗೆ ಸರಿಯಾಗಿ ಹಾಲು ಉಣಿಸುವ ವಿಧಾನ:**

ಮಗುವಿನ ತಲೆ ಉದ್ದಗಲ ರೀತಿಯಲ್ಲಿ ಇರುವಂತೆ ಮಗುವನ್ನು ಹಿಡಿದುಕೊಳ್ಳಬೇಕು.


- ಮಗುವಿನ ತಲೆ ಮೊಲೆಯತ್ತ ಇರಬೇಕು ಹಾಗೂ ಮೂಗು ಮೊಲೆತೊಟ್ಟಿಗಿಂತ ಕೆಳಗಿರಬೇಕು
- ಚೆನ್ನಾಗಿ ಆಧಾರ ಸಿಗುವುದಕ್ಕಾಗಿ ಮಗುವನ್ನು ತೋಳಲ್ಲಿ ಹಿಡಿದುಕೊಳ್ಳಬೇಕು
- ಮಗು ಬಾಯಿ ತೆರೆಯುವಂತೆ ಮೊಲೆ ತೊಟ್ಟನ್ನು ಮಗುವಿನ ಬಾಯಿಗೆ ಹಾಕಬೇಕು. ಮಗುವಿನ ಕೆಳತುಟಿ ಮೊಲೆತೊಟ್ಟಿನ ಕೆಳಗಿರಬೇಕು. ಮೊಲೆತೊಟ್ಟನ್ನು ಮಗುವಿನ ಬಾಯೊಳಗೆ ಪೂರ್ತಿಯಾಗಿ ಕುಳಿತುಕೊಳ್ಳುವಂತೆ ಮಾಡಬೇಕು.
- ಸರದಿ ಪ್ರಕಾರ ಎರಡೂ ಸ್ಥನಗಳಿಂದ ಮಗುವಿಗೆ ಹಾಲು ಉಣಿಸಬೇಕು. ಒಂದು ಸ್ಥನದಿಂದ ಪೂರ್ತಿ ಹಾಲು ಖಾಲಿಯಾಗುವುದಕ್ಕೆ ಕನಿಷ್ಠ 20 ನಿಮಿಷಗಳು ಬೇಕು.

ಲಕ್ಷ್ಮಿ PHC ಸಿಸ್ಟರ್‌ನ ಮಾರ್ಗದರ್ಶನಗಳನ್ನು ತುಂಬಾ ಜಾಗರೂಕತೆಯಿಂದ ಪಾಲಿಸುತ್ತಾಳೆ ಮತ್ತು ಮಗುವಿಗೆ ಹಾಲುಣಿಸಲು ಪ್ರಾರಂಭಿಸುತ್ತಾಳೆ. ಅವಳು ತನಗೆ **"ತಾಯಿಯ ಮಮತೆ"** ನೀಡಿದ್ದಕ್ಕಾಗಿ ಹೃದಯದಲ್ಲಿಯೇ PHC ಸಿಸ್ಟರ್‌ಗೆ ಕೃತಜ್ಞತೆ ಸಮರ್ಪಿಸುತ್ತಾಳೆ.

ಸಹಾಯಕರು ಈ ಕೆಳಗಿನ ಪ್ರಶ್ನೆಗಳನ್ನು ಮುಂದಿಡುತ್ತಾರೆ:

ಪ್ರ. ದಪ್ಪವಾದ ಹಳದಿ ಹಾಲನ್ನು ಮಗುವಿಗೆ ಕುಡಿಸುವುದು ಏಕೆ ಅತ್ಯಂತ ಪ್ರಾಮುಖ್ಯವಾಗಿದೆ.

ಪ್ರ. ಮಗು ಜನಿಸಿದ ತಕ್ಷಣವೇ ಮಗುವಿಗೆ ಮೊಲೆಹಾಲು ಉಣಿಸಬೇಕೇ?



అమ్మ కొంగు

అమ్మ కొంగు ఆప్యాయత, అతిచక్కని సురక్షిత

## ARI ಮತ್ತು ಅತಿಸಾರ ಕುರಿತಾದ ಅಪಾಯದ ಸಂಕೇತಗಳು ಮತ್ತು ಸೋಂಕು ತಡೆಗಟ್ಟುವುದು



ಲಕ್ಷ್ಮಿಯ ಪ್ರಸವದ ಬಳಿಕ ಎಲ್ಲವೂ ಚೆನ್ನಾಗಿ ಸಾಗುತ್ತದೆ. ಮಗು ಇದೀಗ ಲಕ್ಷ್ಮಿಯ ಪಕ್ಕದಲ್ಲಿ ನಿದ್ರಿಸಿದೆ, ಆಕೆಯ ಶರೀರಕ್ಕೆ ಅತ್ಯಂತ ಸಮೀಪದಲ್ಲಿದೆ. **PHC ಸಿಸ್ಟರ್ ಹಾಸಿಗೆಯಲ್ಲಿ ಲಕ್ಷ್ಮಿಯ ಪಕ್ಕದಲ್ಲಿ ಕುಳಿತುಕೊಳ್ಳುತ್ತಾಳೆ ಮತ್ತು ಹೇಳುತ್ತಾಳೆ:**

"ಲಕ್ಷ್ಮಿ, ಗರ್ಭಾವಸ್ಥೆಯಲ್ಲಿ ನೀನು ನಿನ್ನ ಆರೋಗ್ಯ ಮತ್ತು ಶುಚಿತ್ವದ ಬಗ್ಗೆ ಜಾಗ್ರತೆ ವಹಿಸಿದಂತೆ, ಈಗಲೂ ಕೂಡಾ ನೀನು ಅದೇ ಕ್ರಮಗಳನ್ನು ಅನುಸರಿಸಬೇಕು. ನಿಜ ಹೇಳಬೇಕೆಂದರೆ, ಈಗ ನೀನು ಇನ್ನಷ್ಟು ಹೆಚ್ಚು ಮುನ್ನೆಚ್ಚರಿಕೆ ವಹಿಸಬೇಕು. ಏಕೆಂದರೆ ನವಜಾತ ಶಿಶುವಿಗೆ ಸೋಂಕು ತಗುಲಬಹುದಾದ ಅಪಾಯವಿರುತ್ತದೆ."

**ಲಕ್ಷ್ಮಿ ಎಚ್ಚರದಿಂದ ಕೇಳುತ್ತಾಳೆ–**"ಸೋಂಕುಗಳು? ಸೋಂಕುಗಳು ಎಂದರೇನು ಅಕ್ಕಾ?"

**PHC ಸಿಸ್ಟರ್ ಮತ್ತೆ ವಿವರಿಸುತ್ತಾರೆ** "ಸರಿ... ನಿಮ್ಮ ಮಗುವಿಗೆ ಶ್ವಾಸೋಚ್ಛ್ವಾಸದ ಮೂಲಕ ಸೋಂಕು ಮತ್ತು ಅತಿಸಾರ ಬರಬಹುದಾದ ಅಪಾಯವಿದೆ. ಶ್ವಾಸೋಚ್ಛ್ವಾಸದ ಸೋಂಕುಗಳು ಮೂಗು, ಗಂಟಲು, ಉಸಿರಾಟದ ಹಾದಿ, ಶ್ವಾಸಕೋಶಗಳು ಮೊದಲಾದವುಗಳಲ್ಲಿ ತಗುಲಬಹುದು. ಇದರಿಂದಾಗಿ ಮಗುವಿಗೆ ಉಸಿರಾಡಲು ಕಷ್ಟವಾಗುತ್ತದೆ. ಇನ್ನೊಂದು ಕಡೆಯಿಂದ, ಅತಿಸಾರದ ಕಾರಣದಿಂದಾಗಿ ಅಜೀರ್ಣ ಉಂಟಾಗಬಹುದು ಮತ್ತು ಆಗಾಗ ಮಲ ಹೋಗುತ್ತಿರಬಹುದು. ಒಂದು ವೇಳೆ ಈ ಪರಿಸ್ಥಿತಿಗಳಿಗೆ ಸಕಾಲದಲ್ಲಿ ಶುಶ್ರೂಷೆ ನೀಡದಿದ್ದಲ್ಲಿ ಮಗುವಿನ ಪ್ರಾಣಕ್ಕೆ ಅಪಾಯವಿರುತ್ತದೆ."

ಇದು ಲಕ್ಷ್ಮಿ ಮತ್ತು ಅವಳ ಕುಟುಂಬಕ್ಕೆ ಚಿಂತೆ ತರುವಂತೆ ಮಾಡುತ್ತದೆ. **ಲಕ್ಷ್ಮಿಯ ಅತ್ತೆ ಹೇಳುತ್ತಾಳೆ–**"ಮಗುವನ್ನು ಇಂತಹ ಸೋಂಕುಗಳಿಂದ ಕಾಪಾಡುವುದಕ್ಕಾಗಿ ಏನು ಮಾಡಬೇಕು?"



అమ్మ కొంగు

అమ్మ కొంగు ఆప్యాయత, అతిచక్కని సురక్షిత

**PHC ಸಿಸ್ಟರ್ ವಿವರಿಸುತ್ತಾರೆ** "ಕೆಲವೊಮ್ಮೆ ನಾವು ಮಗುವಿನ ಆರೈಕೆಯಲ್ಲಿ ಎಷ್ಟೊಂದು ಮಗ್ನರಾಗಿರುತ್ತೇವೆ ಎಂದರೆ ನಮ್ಮ ಶುಚಿತ್ವವನ್ನು ಮರೆತುಬಿಡುತ್ತೇವೆ. ಯಾವುದೇ ಪ್ರಕಾರದ ಸೋಂಕನ್ನು ತಡೆಗಟ್ಟುವುದಕ್ಕಾಗಿ ಇದು ಕೂಡಾ ಅತ್ಯಂತ ಪ್ರಾಮುಖ್ಯವಾಗಿದೆ.



**ಈ ಕೆಳಗಿನ ಶುಚಿತ್ವ ಕ್ರಮಗಳನ್ನು ಪಾಲಿಸಬೇಕಾಗುತ್ತದೆ:** (ಇಲ್ಲಿ ನಾವು ಸ್ವಚ್ಛತೆ ಮತ್ತು ಶುಚಿತ್ವ ಅಭ್ಯಾಸಗಳ ಚಾರ್ಟ್ ತೋರಿಸುತ್ತೇವೆ)

ಅಡುಗೆ ಮಾಡುವುದಕ್ಕೆ ಮುಂಚೆ ಮತ್ತು ಬಳಿಕ ಹಾಗೂ ಶೌಚಾಲಯಕ್ಕೆ ಹೋಗಿ ಬಂದ ಬಳಿಕ ಕೈಗಳನ್ನು ತೊಳೆಯಬೇಕು.

ಮಗುವಿಗೆ ಉಣಿಸುವುದಕ್ಕೆ ಮುಂಚೆ ಕೈಗಳನ್ನು ಸ್ವಚ್ಛ ಮಾಡಬೇಕು


- ಹೊರಗಿನ ಉಣಿಸುವಿಕೆಯಿಂದ ಸೋಂಕು ತಗುಲಬಹುದಾದ ಕಾರಣ ಕೇವಲ ಮೊಲೆಹಾಲನ್ನು ಮಾತ್ರವೇ ಮಗುವಿಗೆ ಉಣಿಸಿರಿ
- ಮನೆಯಲ್ಲಿ ಮತ್ತು ಮನೆಯ ಸುತ್ತಮುತ್ತಲಿನ ಆವರಣದಲ್ಲಿ ಶುಚಿತ್ವವನ್ನು ಕಾಪಾಡಿ
- ಆಹಾರ ಪದಾರ್ಥಗಳನ್ನು ಸರಿಯಾಗಿ ಮುಚ್ಚಬೇಕು
- ಕೆಮ್ಮುವಾಗ ಮತ್ತು ಶೀನುವಾಗ ಬಾಯಿ ಮತ್ತು ಮೂಗುಗಳನ್ನು ಮುಚ್ಚಬೇಕು
- ಭೇಟಿ ಮಾಡುವ ಆಗಂತುಕರಿಗೆ ಹಾಗೂ ಅದರಲ್ಲೂ ಮುಖ್ಯವಾಗಿ ಸೋಂಕು ಹೊಂದಿರುವವರಿಗೆ (ಶೀತ, ಕೆಮ್ಮು, ತ್ವಚೆ ಸೋಂಕು ಹೊಂದಿರುವವರಿಗೆ) ಮಗುವನ್ನು ಎತ್ತಲು ಮತ್ತು ಮಗುವಿನ ಸಮೀಪಕ್ಕೆ ಬರಲು ಅವಕಾಶ ಕೊಡಬೇಡಿ.

**PHC** ಸಿಸ್ಟರ್ ಮುಂದುವರಿಯುತ್ತಾರೆ–"ಈ ಕ್ರಮಗಳನ್ನು ಅನುಸರಿಸುತ್ತಾ, ನಿಮ್ಮ ಮಗು ಶ್ವಾಸೋಚ್ಛ್ವಾಸದ ಸೋಂಕುಗಳು ಮತ್ತು ಅತಿಸಾರ ಪಡೆಯದಂತೆ ತಡೆಗಟ್ಟಬಹುದಾಗಿದೆ."



అమ్మ కొంగు

అమ్మ కొంగు ఆప్యాయత, అతిచక్కని సురక్షత




**ಈ ಸೋಂಕುಗಳ ಬಗ್ಗೆ ಅರಿತುಕೊಂಡ ಬಳಿಕ ಅತ್ತೆ ಕೇಳುತ್ತಾರೆ:**

"ಹೇಳಿ ಅಕ್ಕಾ, ನಾವು ಪಾಲಿಸಬಹುದಾದ ಇನ್ನು ಬೇರೆ ಯಾವುದಾದರೂ ಕ್ರಮಗಳಿವೆಯೇ?"

ಸಂಪೂರ್ಣ ಕುಟುಂಬ ಈ ಪ್ರಕಾರವಾಗಿ ಕಾಳಜಿ ವಹಿಸುತ್ತಿರುವುದನ್ನು ಕಂಡು


**PHC ಸಿಸ್ಟರ್‌ಗೆ ತುಂಬಾ ಸಂತೋಷವಾಗುತ್ತದೆ. ಅವಳು ಮುಗುಳ್ನಗುತ್ತಾ ಹೇಳುತ್ತಾಳೆ."ಹೌದು, ನೀವುಗಳೆಲ್ಲಾ ಪಾಲಿಸಬೇಕಾದ ಇನ್ನೂ ಕೆಲವಾರು ಮುನ್ನೆಚ್ಚರಿಕೆ ಕ್ರಮಗಳಿವೆ, ಅಂದರೆ –**

- ಮಗು ನಿರ್ಜೀವವಾಗಿ ಅಥವಾ ಮೂರ್ಛೆ ತಪ್ಪಿದಂತೆ ಕಾಣಿಸುತ್ತದೆ
- ಕುಡಿಯಲು ಅಥವಾ ಆಹಾರ ಸೇವಿಸಲು ಆಗುವುದಿಲ್ಲ
- ಮಗು ಸಾಮಾನ್ಯಕ್ಕಿಂತ ಹೆಚ್ಚು ವೇಗವಾಗಿ ಉಸಿರಾಡುತ್ತದೆ
- ಜ್ವರ ಅಥವಾ ಶರೀರ ತಣ್ಣಗಿರುವುದು



అమ్మ కొంగు

అమ్మ కొంగు ఆప్యాయత, అతిచక్కని సురక్షిత



**PHC ಸಿಸ್ಟರ್ ಮತ್ತೆ ವಿವರಿಸುತ್ತಾರೆ:**

"ಒಂದು ವೇಳೆ ನೀವು ಇಲ್ಲಿ ತಿಳಿಸಿರುವ ಯಾವುದೇ ಲಕ್ಷಣಗಳನ್ನು ಗಮನಿಸಿದ್ದಲ್ಲಿ, ಮನೆಯಲ್ಲೇ ಚಿಕಿತ್ಸೆ ಮಾಡಲು ಹೊರಡಬೇಡಿ. ಮಗುವನ್ನು ತಕ್ಷಣವೇ **PHC** ಗೆ ಕರೆದುಕೊಂಡು ಬನ್ನಿ. ಇಲ್ಲಿ ನಾವು ಸರಿಯಾದ ಚೆಕ್ ಅಪ್ ಮಾಡುತ್ತೇವೆ ಹಾಗೂ ಮಗುವಿಗೆ ಸರಿಯಾದ ಚಿಕಿತ್ಸೆ ನೀಡುತ್ತೇವೆ."

**ಲಕ್ಷ್ಮಿಯ ಅತ್ತೆ ಉತ್ತರಿಸುತ್ತಾಳೆ:**

"ಖಂಡಿತಾ ಅತ್ತೆ, ನಾವು ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿರಿಸುತ್ತೇವೆ. ಎಷ್ಟೆಂದರೂ ಮಗು ನಮಗೆ ಮೊಮ್ಮಗು ಅಲ್ಲವೇ?"

ಈ ಮಾತಿಗೆ ಎಲ್ಲರೂ ಮುಗುಳ್ನಗುತ್ತಾರೆ.

**PHC** ಸಿಸ್ಟರ್ ತೋರಿಸಿರುವ ಅಕ್ಕರೆಯಿಂದ ಲಕ್ಷ್ಮಿಗೆ ಮತ್ತೆ ಸಂತೋಷವಾಗುತ್ತದೆ. **PHC** ಸಿಸ್ಟರ್‌ನಲ್ಲಿ ಆಕೆ ಮತ್ತೆ **"ತಾಯಿಯ ಮಮತೆ"**ಯನ್ನು ಕಾಣುತ್ತಾಳೆ.

ಸಹಾಯಕರು ಈ ಕೆಳಗಿನ ಪ್ರಶ್ನೆಗಳನ್ನು ಮುಂದಿಡುತ್ತಾರೆ

ಪ್ರ. ಶ್ವಾಸೋಚ್ಛ್ವಾಸದ ಖಾಯಿಲೆಗಳು ಮತ್ತು ಅತಿಸಾರದಿಂದ ಮಗುವನ್ನು ಕಾಪಾಡುವುದಕ್ಕಾಗಿ ಯಾವ ಕ್ರಮಗಳನ್ನು ಅನುಸರಿಸಬಹುದು?

ಪ್ರ. ಮಗುವಿನ ಅಪಾಯದ ಸಂಕೇತಗಳು ಯಾವುವು?

ಪ್ರ. ಯಾವುದೇ ಅಪಾಯದ ಸಂಕೇತ ಕಂಡಾಗ ನೀವು ಏನು ಮಾಡುತ್ತೀರಿ?